'ಅರ್ಥವಿಲ್ಲದ ಪ್ರಶ್ನೆ' ಎನ್ನುವಂತೆ ಅಖಿಲೇಶ್ ದಿಟ್ಟಿಸಿದ ರೆವರೆಂಡರತ್ತ. 'ಅಖಿಲಾ ಎಂದರೆ ನನಗೆ ಪಂಚಪ್ರಾಣ ಏನಾಯಿತೋ... ಹೇಗೆ ಬೆಂಕಿ ಅನಾಹುತಕ್ಕೆ ಬಲಿಯಾದಳೋ ಒಂದೂ ಅರ್ಥವಾಗ್ತಿಲ್ಲ. ಎಲ್ಲಾ ಒಂದು ಕೆಟ್ಟ ಕನಸಿನಂತೆ ನಡೆದುಹೋಯ್ತು' ವಿವರಿಸುತ್ತಾ ಅವನ ಕಣ್ಣುಗಳು ಒದ್ದೆಯಾದವು.

'ಆ ದಿನ ಏನ್ ನಡೀತು ಅಂತ ಸ್ವಲ್ಪ ವಿವರವಾಗಿ ಹೇಳಿ' ಎಂದು ಕೇಳಿದರು ರೆವರೆಂಡ್. ಅವನ ವಾಸದ ಕೋಣೆಯನ್ನು ಹುಡುಕಲಾರಂಭಿಸಿದರು.

ಪುಸ್ತಕಗಳಿದ್ದ ಕಪಾಟಿನಲ್ಲಿ ಕೆಲವು ಇಂಗ್ಲಿಷ್‌ನ ವಿಜ್ಞಾನದ ಪತ್ರಿಕೆಗಳಿದ್ದವು. ಅವುಗಳಲ್ಲಿ ಕೆಲವು ಲೇಖನಗಳ ಸಾಲುಗಳ ಮೇಲೆ ಪೆನ್ನಿಂದ ಅಂಡರ್‌ಲೈನ್ ಮಾಡಲಾಗಿತ್ತು. ಆ ಸಾಲುಗಳನ್ನು ಆಸಕ್ತಿಯಿಂದ ಓದಿದರು.

'ನನ್ನ ಎಲ್ಲಾ ಕನಸುಗಳು ಸುಟ್ಟು ಕ್ಷಣದಲ್ಲೇ ಭಸ್ಮವಾಗಿ ಹೋಯ್ತು ಸಾರ್! ಅಸಲು ಏನು ನಡೆಯಿತೋ, ಹೇಗೆ ಸಂಭವಿಸಿತೋ ನನಗೆ ತಿಳಿಯುತ್ತಿಲ್ಲ ಸಾರ್!' ಮರುಗುತ್ತಾ ಅಳಲು ಶುರು ಹಚ್ಚಿಕೊಂಡ ಅಖಿಲೇಶ್.

ಅವನ ರೋದನವನ್ನು ರೆವರೆಂಡ್ ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. 'ಡಿಹಾನ್ ಕ್ಯಾಂಪ್ ಬೆಲ್, ನೂರ್ ಭಕ್ಷ ಅವರ ಪ್ರಾಣಿಗಳ ಮೇದಸ್ಸು ಸುಡುವುದು, ಬೆಂಕಿಯಲ್ಲಿ ಮನುಷ್ಯ ಸುಡುವುದು ಒಂದು ಪರಿಶೋಧನೆ, ಎರಡೂ ಅದ್ಭುತ ಲೇಖನಗಳು' ಎಂದರು.

ಅಳುವುದನ್ನು ನಿಲ್ಲಿಸಿ ರೆವರೆಂಡ್‌ರತ್ತ ನೋಡಿದ ಅಖಿಲೇಶ್.

'ಎ.ಎಂ. ಕ್ರಿಸ್ಟೀನ್‌ಸನ್ ಸಂಶೋಧನೆಯ 'ಎಕ್ಸ್‌ಪೆರಿಮೆಂಟ್ಸ್ ಇನ್ ಕಂಬಸ್ಟಾಬಲಿಟಿ ಆಫ್ ಹ್ಯೂಮನ್ ಬಾಡಿ...' ಮಾನವನ ದೇಹ ಬೆಂಕಿಯಲ್ಲಿ ಸುಡುವುದು ಸಂಶೋಧನೆಯಲ್ಲಿ ಸಾಬೀತಾಗಿದೆ. ಅದು ಒಂದು ಅತ್ಯುತ್ತಮ ದಾಖಲಾರ್ಹ ಲೇಖನ!' ಎಂದರು ರೆವರೆಂಡ್.

ತಬ್ಬಿಬ್ಬಾದ ಅಖಿಲೇಶ್. ಗಕ್ಕನೆ ಪತ್ರಿಕೆಯನ್ನು ರೆವರೆಂಡರ ಕೈಯಿಂದ ಕಸಿದುಕೊಂಡು ಓಡಲು ನೋಡಿದ. ಅಷ್ಟರಲ್ಲೇ ಜಾಗರೂಕರಾದ ರೆವರೆಂಡ್, ಅಖಿಲೇಶ್‌ನ ಕೊರಳಪಟ್ಟಿ ಹಿಡಿದೆಳೆದು ನಿಲ್ಲಿಸಿ, ಕೂಡಲೇ ತಮ್ಮ ಪ್ಯಾಂಟ್ ಜೇಬಿಂದ ಛಾರ್ಟ್‌ಪಾಯಿಂಟ್ – 2 ರೇಂಜ್ ಪಿಸ್ತೂಲ್‌ನ್ನು ಮತ್ತೊಂದು ಕೈನಿಂದ ಹೊರತೆಗೆದು ಅವನ ಹಣೆಗೆ ಗುರಿ ಇಟ್ಟರು. 'ನಿಜ ಹೇಳು... ಯಾಕೆ ಇಂತಹ ಕೆಲಸ ಮಾಡಿದೆ? ಹೇಳದಿದ್ದರೆ ಶೂಟ್ ಮಾಡಿಬಿಡುತ್ತೇನೆ! ಯೂ ರ್‍ಯಾಸ್ಕಲ್!!' ಎಂದರು.

ಮೌನ ವಹಿಸಿದ ಅಖಿಲೇಶ್...

'ಬಾಯಿಬಿಡೋ! ಅಂಥ ಒಳ್ಳೆಯ ಹುಡುಗಿ ಅಖಿಲಾನ ಕೊಲೆ ಮಾಡಿದೆ, ಯಾಕೋ?'

'ಸಾರ್! ನಾನೇನೂ ಕೊಲೆ ಮಾಡಿಲ್ಲ. ಅದಕ್ಕೂ ನನಗೂ ಸಂಬಂಧ ಕಲ್ಪಿಸಬೇಡಿ. ಇಷ್ಟಕ್ಕೂ ನಾನೇ ಕೊಲೆ ಮಾಡಿದ್ದೇನೆ ಎಂಬುದಕ್ಕೆ ನಿಮ್ಮ ಬಳಿ ಯಾವ ಬಲವಾದ ಸಾಕ್ಷ್ಯಾಧಾರಗಳಿವೆ?' ಎಂದು ಭಂಡ ಧೈರ್ಯದಿಂದ ಉಡಾಯಿಸಿ ಮಾತನಾಡಿದ ಅಖಿಲೇಶ್.

'ಸ್ಪಾಂಟೇನಿಯಸ್ ಕಂಬಸ್ಟ್ಚನ್ ಆಫ್ ಹ್ಯೂಮನ್ ಬಾಡಿ – ಕುರಿತ ಲೇಖನವಿರುವ ಇಂಗ್ಲಿಷ್‌ನ ಜರ್ನಲ್ಸ್ ಅಂಡ್ ಪೀರಿಯಾಡಿಕಲ್ಸ್‌ನ್ನು ನೀನು ಅಭ್ಯಾಸ ಮಾಡಿದ್ದು ಒಳ್ಳೆಯ ಸಾಕ್ಷಿ! ಸರಿತಾನೆ?'

'ಅರೇ! ಇದು ಒಳ್ಳೆ ತಾಪತ್ರಯಕ್ಕೇ ಬಂತಲ್ಲಾ ಸಾರ್! ಮನುಷ್ಯ ತನ್ನ ಜ್ಞಾನಾರ್ಜನೆಗೆ, ಮನೋವಿಕಾಸಕ್ಕೆ ಏನೂ ಹೊಸ ವಿಜ್ಞಾನದ ವಿಷಯಗಳನ್ನು ಓದಿ ತಿಳಿದುಕೊಳ್ಳಲೇ ಬಾರದಾ!?'

'ಅದು ಬೇರೆ ವಿಷಯ! ಅಖಿಲಾಳ ಹತ್ಯೆ ಈ 'ಸ್ಪಾಂಟೇನಿಯಸ್ ಕಂಬಸ್ಟ್ಚನ್ ಆಫ್ ಹ್ಯೂಮನ್